# ಪಿಸಿಓಡಿ / ಪಿಸಿಓಎಸ್ (ಪಾಲಿಸಿಸ್ಟಿಕ್ ಒವರಿಯನ್ ಡಿಸೀಸ್ / ಪಾಲಿಸಿಸ್ಟಿಕ್ ಒವರಿಯನ್ ಸಿಂಡ್ರೋಮ್)



### 1. ಪಿಸಿಓಡಿ (ಪಾಲಿಸಿಸ್ಟಿಕ್ ಒವರಿಯನ್ ಡಿಸೀಸ್) ಎಂದರೇನು?

ಹಾರ್ಮೋನ್‌ಗಳ ಅಸಮತೋಲನತೆ ಕಾರಣದಿಂದಾಗಿ ಉಂಟಾಗುವ ಒಂದು ಕಾಯಿಲೆಗೆ ಪಿಸಿಓಡಿ ಎನ್ನಲಾಗುತ್ತದೆ. ಒಂದು ಅಥವಾ ಎರಡೂ ಅಂಡಾಶಯಗಳಲ್ಲಿ ಕೋಶಗಳು ಬೆಳೆಯುವುದರಿಂದಾಗಿ ಇದು ಉಂಟಾಗುತ್ತದೆ. ಹಿಗ್ಗಿದ ಅಂಡಾಶಯವು ಅಧಿಕ ಆಂಡ್ರೋಜೆನ್ ಮತ್ತು ಈಸ್ಟ್ರೋಜೆನ್ ಹಾರ್ಮೋನ್‌ಗಳ್ನು ಉತ್ಪತ್ತಿಗೊಳಿಸುತ್ತದೆ. ಆದ್ದರಿಂದ ರೋಗಿಯು ಇನ್ಸುಲಿನ್ ನಿರೋಧಕವಾಗುತ್ತಾರೆ, ಇದರಿಂದಾಗಿ ಆಂಡ್ರೋಜೆನ್‌ಗಳ ಉತ್ಪಾದನೆಯಲ್ಲಿ ಹೆಚ್ಚಳ ಉಂಟಾಗುತ್ತದೆ. ಮತ್ತೆ ಮತ್ತೆ ಹೀಗೆ ಉಂಟಾಗುವುದರಿಂದ ಪಿಸಿಓಡಿ ಗುಣಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

### 2. ಪಿಸಿಓಡಿ ಉಂಟಾಗಲು ಕಾರಣವೇನು?

ಪಿಸಿಓಡಿ ಉಂಟಾಗುವ ಕಾರಣ ಸಂಪೂರ್ಣವಾಗಿ ತಿಳಿದುಬಂದಿಲ್ಲ, ಆದರೆ ಇದು ಆನುವಂಶಿಕ, ನೈಸರ್ಗಿಕ ಮತ್ತು ಜೀವನಶೈಲಿ ಅಂಶಗಳ ಸಂಕೀರ್ಣ ಪರಸ್ಪರ ಕ್ರಿಯೆಗಳ ಫಲಿತಾಂಶವಾಗಿದೆ.

### 3. ಪಿಸಿಓಡಿ ಗುಣಲಕ್ಷಣಗಳು ಏನು?

ಅನಿಯಮಿತ ಋತುಚಕ್ರ ಅಥವಾ ಋತುಚಕ್ರ ಆಗದಿರುವಿಕೆ । ಧಿಡೀರ್ ತೂಕ ಹೆಚ್ಚಳ ಮತ್ತು ಕ್ರಮೇಣ ಅಧಿಕಗೊಳ್ಳುವಿಕೆ । ದೇಹ ಮತ್ತು ಮುಖದ ಮೇಲೆ ಅನಗತ್ಯ ರೋಮ ಬೆಳೆಯುವಿಕೆ । ಕೂದಲು ತೆಳ್ಳಗಾಗುವಿಕೆ ಮತ್ತು ಉದುರುವಿಕೆ । ಮುಖದ ಮೇಲೆ, ತೋಳಿನ ಮೇಲ್ಭಾಗದಲ್ಲಿ, ಭುಜಗಳಲ್ಲಿ ಮೊಡವೆ ಉಂಟಾಗುವಿಕೆ । ಬಂಜೆತನ

### 4. ಪಿಸಿಓಡಿ'ಗೆ ಈಡಾಗುವವರು ಯಾರು?

ಪಿಸಿಓಡಿ ಸಮಸ್ಯೆ ಯುವ ತರುಣಿಯಲ್ಲಿ ಮತ್ತು ಬಹುತೇಕ 20 ರಿಂದ 30 ವರ್ಷದ ಪ್ರಾಯದವರಲ್ಲಿ ಕಂಡುಬರುತ್ತದೆ. ಮಗು ಹೊಂದುವ ಪ್ರಾಪ್ತ ವಯೋಮಾನದ ಮಹಿಳೆಯರಲ್ಲಿ ಇದು ಸಾಮಾನ್ಯ.

### 5. ಪಿಸಿಓಡಿ ಚಿಕಿತ್ಸೆ ಏಕೆ ಮಹತ್ವದ್ದಾಗಿದೆ?

ಪಿಸಿಓಡಿ ಎಂಬುದು ಇಂದಿನ ದಿನಗಳಲ್ಲಿನ ಯುವ ತರುಣಿಯರ ಮತ್ತು ಮಹಿಳೆಯರ ಆರೋಗ್ಯಕ್ಕೆ ಸಂಬಂಧಿತ ಗಂಭೀರ ವಿಷಯವಾಗಿದೆ. ಆರಂಭಿಕ ಹಂತದಲ್ಲಿಯೇ ಈ ಚಿಕಿತ್ಸೆಯನ್ನು ಪ್ರಾರಂಭಿಸಬೇಕು, ಇಲ್ಲವಾದಲ್ಲಿ ಪಿಸಿಓಡಿ ರೋಗಿಗಳು ಮಧುಮೇಹ, ಸ್ಲೀಪ್ ಅಪ್ನಿಯಾ ಮತ್ತು ಬಂಜೆತನ (ಗರ್ಭಧಾರಣೆಯಲ್ಲಿ ಮತ್ತು ಮಗು ಹೆರುವ ಸಂದರ್ಭದಲ್ಲಿ ಸಂಕೀರ್ಣತೆ ಉಂಟಾಗಲು ಕಾರಣವಾಗುತ್ತದೆ) ಸಮಸ್ಯೆಗಳಿಗೆ ಈಡಾಗಬಹುದಾಗಿರುತ್ತದೆ. ಇದರಿಂದಾಗಿ ತೀವ್ರತರ ಖಿನ್ನತೆ, ಅಂಡಾಶಯ ಗೆಡ್ಡೆ ಮತ್ತು ಇನ್ನು ಕೆಲವರಲ್ಲಿ ಹೃದಯ ಸಮಸ್ಯೆಗಳು ಕೂಡ ಎದುರಾಗುತ್ತವೆ.

### 6. ಪಿಸಿಓಡಿ'ಯನ್ನು ಹೇಗೆ ತಪಾಸಿಸಲಾಗುತ್ತದೆ?

ಮೊದಲ ಬಾರಿ ಮೈನೆರೆತಾಗಿನಿಂದ ಋತುಚಕ್ರದಲ್ಲಿ ಉಂಟಾಗಿರುವ ಅನಿಯಮಿತತೆ, ಅನಗತ್ಯ ರೋಮಗಳ ಬೆಳವಣಿಗೆ, ಮೊಡವೆ ಕುರಿತಾದ ವೈದ್ಯಕೀಯ ಇತಿಹಾಸ ಮೇರೆಗೆ ಮತ್ತು ಅಲ್ಟ್ರಾಸೋನೊಗ್ರಾಫಿ ಮುಖಾಂತರ ಅಂಡಾಶಯದ ಮೇಲೆ ಉಂಟಾಗಿರುವ ಗಂಟುಗಳ ಆಧಾರದಲ್ಲಿ ಪಿಸಿಓಡಿ ಸಮಸ್ಯೆಯನ್ನು ತಪಾಸಿಸಿ ಗುರುತಿಸಲಾಗುತ್ತದೆ.

### 7. ಹೋಮಿಯೋಪತಿ ಚಿಕಿತ್ಸೆಯನ್ನು ಏಕೆ ಪಡೆಯಬೇಕು?

ಪಿಸಿಓಡಿ ಕಾಯಿಲೆಗೆ ಯಾವ ಚಿಕಿತ್ಸೆ ಲಭ್ಯವಿದೆ?

ಪಿಸಿಓಡಿ ನಿವಾರಣೆಗೆ ಹೋಮಿಯೋಪತಿ ಚಿಕಿತ್ಸೆ ಅತ್ಯಂತ ಸೂಕ್ತವಾಗಿದೆ. ಪಾಸಿಟಿವ್ ಹೋಮಿಯೋಪತಿ ವೈದ್ಯರು ಪಿಸಿಓಡಿ ಸಮಸ್ಯೆಗೆ ಕಾರಣವಾಗುವ ರೋಗಿಯಲ್ಲಿನ ಆನುವಂಶಿಕ, ಪರಿಸರಾತ್ಮಕ ಮತ್ತು ಜೀವನಶೈಲಿಗೆ ಸಂಬಂಧಿತ ಅಂಶಗಳ ಮೇಲೆ ಹೆಚ್ಚು ಗಮನ ನೀಡುತ್ತಾರೆ. ಅಷ್ಟೇ ಅಲ್ಲದೆ, ಪಾಸಿಟಿವ್ ಹೋಮಿಯೋಪತಿಯ ಅನುಭವಿ ವೈದ್ಯರಿಂದ ಆರೋಗ್ಯ ಸಮಸ್ಯೆಗಳಿಗೆ ಬಹುತೇಕ ಯಶಸ್ವಿ ಚಿಕಿತ್ಸೆ ನೀಡಲಾಗಿರುವ ಕಾಯಿಲೆ ಎಂದರೆ ಪಿಸಿಓಡಿ.

## ಉಚಿತ ಸಮಾಲೋಚನೆಗೆ ಕರೆಮಾಡಿ: 90360 60319



### 1. ಹೈಪೋಥೈರಾಯ್ಡಿಸಂ ಎಂದರೇನು?

ಕತ್ತಿನ ಮುಂಭಾಗದಲ್ಲಿರುವ ಥೈರಾಯ್ಡ್ ಗ್ರಂಥಿಯ ಚಟುವಟಿಕೆ ಕುಂದುವಿಕೆ ಅಥವಾ ಕ್ಷೀಣಗೊಳ್ಳುವಿಕೆ ಮತ್ತು ಕ್ರಿಯಾಶೀಲತೆಯಲ್ಲಿ ಕಳೆದುಕೊಳ್ಳುವಿಕೆಗೆ ಹೈಪೋಥೈರಾಯ್ಡಿಸಂ ಎನ್ನಲಾಗುತ್ತದೆ. ಹೈಪೋಥೈರಾಯ್ಡಿಸಂ ಸ್ಥಿತಿಯಲ್ಲಿ ಥೈರಾಯ್ಡ್ ಗ್ರಂಥಿಯು ಮೆಟಾಬಲಿಸಂ ಹಾಗೂ ಪ್ರೋಟೀನ್ ಸಿಂಥೆಸಿಸ್‌ಗೆ ಅಗತ್ಯವಾಗಿರುವ ಥೈರಾಯ್ಡ್ ಹಾರ್ಮೋನ್‌ಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸ್ರವಿಸುವುದಿಲ್ಲ ಅಥವಾ ಬಿಡುಗಡೆ ಮಾಡುವುದಿಲ್ಲ.

### 2. ಹೈಪೋಥೈರಾಯ್ಡಿಸಂ ಉಂಟಾಗಲು ಕಾರಣಗಳೇನು?

ಥೈರಾಯ್ಡ್ ಗ್ರಂಥಿಯ ಅಧಿಕ ಕ್ರಿಯಾಶೀಲತೆಗೆ ಹಲವಾರು ಕಾರಣಗಳಿವೆ. ಇವೆಲ್ಲಾ ಕಾರಣಗಳಾದ್ಯಂತ ಹಷಿಮೊಟೊ ಥೈರಾಯ್ಡಿಟಿಸ್, ಸೀವಿಯರ್ ಅಯೋಡಿನ್ ಕೊರತೆ, ಶಸ್ತ್ರಕ್ರಿಯೆ ಮುಖಾಂತರ ಥೈರಾಯ್ಡ್ ಗ್ರಂಥಿಯನ್ನು ಭಾಗಶಃ ಅಥವಾ ಸಂಪೂರ್ಣವಾಗಿ ತೆಗೆದು ಹಾಕುವಿಕೆಯು ಸಾಮಾನ್ಯ ಕಾರಣಗಳಾಗಿವೆ.

### 3. ನನಗೆ ಹೈಪೋಥೈರಾಯ್ಡಿಸಂ ಇದೆ ಎಂದು ತಿಳಿದುಕೊಳ್ಳುವುದು ಹೇಗೆ?

ದೈನಂದಿನ ಚಟುವಟಿಕೆಗಳಲ್ಲಿ ನಿರಾಸಕ್ತಿ, ಅಧಿಕ ನಿದ್ರಾಸಕ್ತಿ, ಶೀತ ಸಹಿಸದಿರುವಿಕೆ, ಕೂದಲು ಉದುರುವಿಕೆ ಮತ್ತು ಕೂದಲು ತೆಳ್ಳಗಾಗುವಿಕೆ, ತ್ವಚೆ ಶುಷ್ಕವಾಗುವಿಕೆ, ಧ್ವನಿ ಒರಟಾಗುವಿಕೆ, ಬುದ್ಧಿಮಾಂದ್ಯತೆ ಲಕ್ಷಣ, ಅನಿಯಮಿತ ಋತುಚಕ್ರ, ಧಿಡೀರ್ ತೂಕ ಹೆಚ್ಚಾಗುವಿಕೆ ಇವೆಲ್ಲಾ ಹೈಪೋಥೈರಾಯ್ಡಿಸಂನ ಗುಣಲಕ್ಷಣಗಳಾಗಿವೆ. ಕುಂಠಿತಗೊಂಡ ಹೃದಯಬಡಿತ ಪ್ರಮಾಣ, ನಾಡಿಮಿಡಿತದ ಪ್ರಮಾಣ, ರಕ್ತಹೀನತೆ ಮತ್ತು ಕುಂಠಿತ ರಕ್ತದೊತ್ತಡ ಪರೀಕ್ಷಿಸುವ ಮೂಲಕ ವೈದ್ಯರು ಹೈಪೋಥೈರಾಯ್ಡಿಸಂನ ಲಕ್ಷಣಗಳನ್ನು ಅರಿತುಕೊಳ್ಳುತ್ತಾರೆ.

### 4. ಹೈಪೋಥೈರಾಯ್ಡಿಸಂ ಅನ್ನು ಹೇಗೆ ಖಚಿತಪಡಿಸಲಾಗುತ್ತದೆ?

ಥೈರಾಯ್ಡ್ ಸ್ಟಿಮ್ಯುಲೇಟಿಂಗ್ ಹಾರ್ಮೋನ್ (ಟಿಎಸ್‌ಎಚ್), ಟಿ3 ಮತ್ತು ಟಿ4 ಪ್ರಮಾಣವನ್ನು ಅಳೆದು ತಿಳಿದುಕೊಳ್ಳಲು ಅನುಕೂಲವಾಗುವ ರಕ್ತ ತಪಾಸಣೆಗಳ ಮತ್ತು ಗುಣಲಕ್ಷಣಗಳ ಪರೀಕ್ಷೆಯ ಮೂಲಕ ಹೈಪೋಥೈರಾಯ್ಡಿಸಂ ಕಂಡುಕೊಳ್ಳಲಾಗುತ್ತದೆ. ಹಷಿಮೊಟೊಸ್ ಥೈರಾಯ್ಡಿಟಿಸ್ ಉಂಟಾಗಿದ್ದ ಸಂದರ್ಭದಲ್ಲಿ, ಹಷಿಮೊಟೊಸ್ ಥೈರಾಯ್ಡಿಟಿಸ್‌ನಿಂದಲೇ ಹೈಪೋಥೈರಾಯ್ಡಿಟಿಸ್ ಉಂಟಾಗಿದೆಯೇ ಎಂಬುದನ್ನು ತಿಳಿಯಲು ಆ್ಯಂಟಿ-ಥೈರಾಯ್ಡ್ ಪೆರಾಕ್ಸೈಡೇಸ್ ಟೆಸ್ಟ್ ಮಾಡಲಾಗುತ್ತದೆ.

### 5. ಹೈಪೋಥೈರಾಯ್ಡಿಸಂ ನಿಯಂತ್ರಣಕ್ಕೆ ಬಾರದಿದ್ದಲ್ಲಿ ಅಪಾಯವಿದೆಯೆ?

ಹೈಪೋಥೈರಾಯ್ಡಿಸಂ ಸಮಸ್ಯೆಗೆ ಚಿಕಿತ್ಸೆ ಪಡೆಯುವುದನ್ನು ನಿರ್ಲಕ್ಷಿಸಿದಲ್ಲಿ ಅಥವಾ ವಿಳಂಬ ಮಾಡಿದಲ್ಲಿ ಹೃದಯ ಸಮಸ್ಯೆ, ನಿದ್ರಾ ಅಸ್ವಸ್ಥತೆಗಳು, ಮಹಿಳೆಯರಲ್ಲಿ ಬಂಜೆತನ ಮತ್ತು ಬುದ್ಧಿಮಾಂದ್ಯತೆಯಂತಹ ಪರಿಣಾಮ ಉಂಟಾಗಬಹುದಾಗಿರುತ್ತದೆ. ಆದ್ದರಿಂದ, ಇದರ ಗುಣಲಕ್ಷಣಗಳು ಕಾಣಿಸಿದ ಕೂಡಲೇ ವೈದ್ಯರನ್ನು ಭೇಟಿಯಾಗಿ ಚಿಕಿತ್ಸೆ ಪಡೆಯುವುದು ಒಳಿತು.

### 6. ಪಾಸಿಟಿವ್ ಹೋಮಿಯೋಪತಿಯು ಹೈಪೋಥೈರಾಯ್ಡಿಸಂ ಅನ್ನು ಹೇಗೆ ನಿವಾರಿಸುತ್ತದೆ?

ಪಾಸಿಟಿವ್ ಹೋಮಿಯೋಪತಿಯಲ್ಲಿ ಅತ್ಯುತ್ತಮ ಹೋಮಿಯೋಪತಿಕ್ ಔಷಧಿಗಳನ್ನು ಬಳಸಿಕೊಂಡು ಹೈಪರ್‌ಥೈರಾಯ್ಡಿಸಂ ಹಾಗೂ ಇತರೆ ಥೈರಾಯ್ಡ್ ಅಸ್ವಸ್ಥತೆಗಳಿಗೆ ತೀವ್ರತರ ಯಶಸ್ವಿ ಚಿಕಿತ್ಸೆ ನೀಡಲಾಗುತ್ತದೆ. ಈ ಚಿಕಿತ್ಸಾ ಅವಧಿಯಲ್ಲಿ ನಿಯಮಿತವಾಗಿ ಥೈರಾಯ್ಡ್ ಹಾರ್ಮೋನ್‌ಗಳನ್ನು ಪರಿಶೀಲಿಸಲಾಗುತ್ತದೆ ಮತ್ತು ಔಷಧೋಪಚಾರದ ಪ್ರಮಾಣವನ್ನು ಹೊಂದಾಣಿಕೆ ಮಾಡಲಾಗುತ್ತದೆ. ಹೈಪರ್‌ಥೈರಾಯ್ಡಿಸಂ ನಿಯಂತ್ರಣಕ್ಕೆ ಅಗತ್ಯವಾದ ಆಹಾರಪದ್ಧತಿಯನ್ನು ಕೂಡ ವೈದ್ಯರಿಂದ ತಿಳಿಸಲಾಗುತ್ತದೆ.

An ISO 9001 - 2000 Certified ®

The art of healing

**Positive Homeopathy**

www.positivehomeopathy.com

ಪಾಸಿಟೀವ್ ಹೋಮಿಯೋಪತಿಯ ಒಂದು ಘಟಕ

Dr.Kiran's **Homeo LIFE**

www.homeolife.in

ಕರ್ನಾಟಕ : ಮಲ್ಲೇಶ್ವರಂ ▪ ಕೋರಮಂಗಲ ▪ ರಾಜಾಜಿನಗರ ▪ ಇಂದಿರಾನಗರ ▪ ಜಯನಗರ ▪ ಹುಬ್ಬಳ್ಳಿ ▪ ಮಂಗಳೂರು ▪ ಬೆಳಗಾವಿ ▪ ದಾವಣಗೆರೆ ▪ ಗುಲ್ಬರ್ಗ ▪ ಮೈಸೂರು । ಆಂಧ್ರಪ್ರದೇಶ